| Published Date: | 4 Aug 2017 | Publication: | Prajavani |
|---|---|---|---|
| Edition: | Bangalore | Page No: | 3 |

# ರಸಪ್ರಶ್ನೆ: ಪಿಎಸ್‌ಬಿಬಿ ಅಕಾಡೆಮಿ ಚಾಂಪಿಯನ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್ (ಟಿಸಿಎಸ್) ನಗರದಲ್ಲಿ ಗುರುವಾರ ಆಯೋಜಿಸಿದ್ದ 'ಟಿಸಿಎಸ್ ಐಟಿ ವಿಜ್-2017' ಮಾಹಿತಿ ತಂತ್ರಜ್ಞಾನ ರಸಪ್ರಶ್ನೆ ಸ್ಪರ್ಧೆಯಲ್ಲಿ ಬನ್ನೇರುಘಟ್ಟ ರಸ್ತೆಯ 'ಪಿಎಸ್‌ಬಿಬಿ ಲರ್ನಿಂಗ್ ಅಕಾಡೆಮಿ' ತಂಡ ಮೊದಲ ಬಹುಮಾನ ಗೆದ್ದುಕೊಳ್ಳುವ ಮೂಲಕ ರಾಷ್ಟ್ರ ಮಟ್ಟದ ಸ್ಪರ್ಧೆಗೆ ಅರ್ಹತೆ ಪಡೆಯಿತು.

8 ರಿಂದ 12ನೇ ತರಗತಿ ವಿದ್ಯಾರ್ಥಿಗಳಿಗಾಗಿ ಆಯೋಜಿಸಲಾಗಿದ್ದ ಈ ಸ್ಪರ್ಧೆಯಲ್ಲಿ ಸುಮಾರು 1,150 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಪಿಎಸ್‌ಬಿಬಿ ಅಕಾಡೆಮಿಯ ಆರ್ಯನ್ ಪಟೇಲ್ ಮತ್ತು ಪ್ರಣವ್ ಪ್ರಭು ಅವರಿದ್ದ ತಂಡ ಚಾಂಪಿಯನ್ ಆಗಿ ಹೊರಹೊಮ್ಮಿತು.

ವಿಜೇತರಿಗೆ ₹60,000ದ ಗಿಫ್ಟ್ ವೋಚರ್, ಟ್ರೋಫಿ, ಪದಕವನ್ನು ಬಹುಮಾನವಾಗಿ ನೀಡಲಾಯಿತು. ಇಂದಿರಾನಗರದ ಎನ್‌ಪಿಎಸ್ ಶಾಲೆಯ ಮುಕ್ತಾ ಜೋಶಿಪುರ ಮತ್ತು ರೋಹನ್ ಕಪೂರ್ ಅವರ ಜೋಡಿ ರನ್ನರ್ ಅಪ್‌ಗೆ ತೃಪ್ತಿಪಟ್ಟುಕೊಂಡಿತು. ಈ ತಂಡಕ್ಕೆ ₹40,000ದ ಗಿಫ್ಟ್ ವೋಚರ್ ನೀಡಲಾಯಿತು.

ನಿವೃತ್ತ ಐಎಎಸ್ ಅಧಿಕಾರಿ ಕೆ. ಜೈರಾಜ್, ಎಡಿಜಿಪಿ ಭಾಸ್ಕರ್‌ರಾವ್ ಹಾಗೂ ಟಿಸಿಎಸ್ ಬೆಂಗಳೂರಿನ ಮುಖ್ಯಸ್ಥ ನಾಗರಾಜ ಇಜಾರಿ ವಿಜೇತರಿಗೆ ಬಹುಮಾನ ವಿತರಿಸಿದರು.

ಫೈನಲ್‌ಗೆ ಅರ್ಹತೆ ಪಡೆದಿದ್ದ ಎಲ್ಲಾ 6 ತಂಡಗಳ ಸದಸ್ಯರಿಗೆ ಟಿಸಿಎಸ್ ವತಿಯಿಂದ ಜಿಮ್ ಬ್ಯಾಗ್, ಪೆನ್ ಡ್ರೈವ್, ಈಯರ್ ಫೋನ್ ಉಪಕರಣಗಳನ್ನು ಬಹಮಾನವಾಗಿ ನೀಡಲಾಯಿತು.

ಈ ವರ್ಷದ ಕ್ವಿಜ್ ಆಟೋಮೇಶನ್, ಕಾಂಟೆಕ್ಸುವಲ್ ನಾಲೆಜ್, ಮಶಿನ್ ಲರ್ನಿಂಗ್ ಮತ್ತು ಏಜೈಲ್ ವಿಷಯಗಳ ಮೇಲೆ ಕೇಂದ್ರೀಕೃತವಾಗಿತ್ತು. ಟಿಸಿಎಸ್ ವಿಜ್ ದೇಶದ 12 ಸ್ಥಳಗಳಲ್ಲಿ ನಡೆಯುತ್ತದೆ. ಅಹಮದಾಬಾದ್, ಬೆಂಗಳೂರು, ಭುವನೇಶ್ವರ, ಚೆನ್ನೈ, ದೆಹಲಿ, ಹೈದರಾಬಾದ್, ಇಂದೋರ್, ಕೊಚ್ಚಿ, ಕೋಲ್ಕತ್ತಾ, ಮುಂಬೈ, ನಾಗಪುರ ಮತ್ತು ಪುಣೆಯಲ್ಲಿ ಈ ಕ್ವಿಜ್ ನಡೆಯಲಿದೆ.

**ಟ್ವಿಟರ್ ಸ್ಪರ್ಧೆ:** ಸ್ಪರ್ಧೆಗೆ ಸಂಬಂಧಪಟ್ಟ ಟ್ವಿಟರ್ ಸ್ಪರ್ಧೆಯಲ್ಲಿ 8,105 ಟ್ವೀಟ್‌ಗಳು ದಾಖಲಾದವು. ಈ ಟ್ವಿಟರ್ ಸ್ಪರ್ಧೆಯಲ್ಲಿ ವಿಜೇತರಾದ ಇಬ್ಬರು ಸ್ಪರ್ಧಿಗಳು ಬಹುಮಾನವಾಗಿ ಬ್ಲೂಟೂತ್ ಸ್ಪೀಕರ್ ಮತ್ತು ಜಿಮ್ ಬ್ಯಾಗ್ ಪಡೆದುಕೊಂಡರು.